**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಸಿಸಿ ನಂಃ 50/2016</u>**

**<u>ಸಿಡಬ್ಲೂಃ8 ಪಿ ಡಬ್ಲ್ಯೂಃ7</u>**

**ಹೆಸರುಃ ದೇವೆಂದ್ರಗೌಡ**

**ತಂದೆ ಹೆಸರುಃ ನೀಲಕಂಠಗೌಡ ಕಂಠೇಪ್ಪನವರ**

**ವಯಸ್ಸುಃ 59 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 07/10/2024.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನನಗೆ ಚಾಸಾಃ7, 9 ರವರ ಪರಿಚಯ ಇದೆ. ಚಾಸಾಃ1 ರಿಂದ 5, 7, 10, 11 ರಿಂದ 35 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಆರೋಪಿ 1, 2 ಹಾಗೂ 4 ರವರನ್ನು ನೋಡಿ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, ಸಾಕ್ಷಿ 5 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

ನಮ್ಮ ಗ್ರಾಮ ಪಂಚಾಯತಿಯಲ್ಲಿ ಹಿರೇಬೂದಿಹಾಳ ಗ್ರಾಮ ಪಂಚಾಯತಿ ಸೇರುತ್ತದೆ ಎಂದರೆ ಸರಿ. 2005 ಮತ್ತು 2006 ರ ಗ್ರಾಮ ಪಂಚಾಯತ ಚುನಾವಣೆ

ಆಗಿದ್ದು ಅದರಲ್ಲಿ ಒಟ್ಟು 11 ಜನ ಸದಸ್ಯರು ಆಯ್ಕೆಯಾಗಿದ್ದರು ಎಂದರೆ ಸಾಕ್ಷಿ 15 ಜನ ಆಯ್ಕೆಯಾಗಿದ್ದರು ಎಂದು ನುಡಿಯುತ್ತಾರೆ. ಅದೇ ಪ್ರಕಾರ ಹಿರೇಬೂದಿಹಾಳ ಗ್ರಾಮದಿಂದ ಶಿವನಗೌಡ ಬನ್ನೂರ ಹಾಗೂ ಅನ್ವಸಾಬ ನದಾಫ ಇವರು ಆಯ್ಕೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಅವಧಿಯಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಅಂತ ಎಮ್ ಎ ನದಾಫ ಎಂದು ಇದ್ದರು ಎಂದರೆ ಸರಿ. ಶಂಕ್ರಪ್ಪ ಸಂಗಣ್ಣನವರ ಮತ್ತು ಬಸವರಾಜ ಮಲ್ಲಿಗವಾಡ ಇವರು ಗುಮಾಸ್ತರಾಗಿ ಕೆಲಸ ಮಾಡುತಿದ್ದರು ಎಂದರೆ ಸರಿ. ಇವರೆಲ್ಲರೂ ತಮ್ಮ ಅವಧಿ ಮುಗಿದಿದ್ದರು ಸಹ ಮುಂದುವರೆದು 3 ತಿಂಗಳವರೆಗೂ ಗ್ರಾಮ ಪಂಚಾಯತಿ ಆಡಳಿತಾಧಿಕಾರಿ ಎ.ಆರ್.ಕುಲಕರ್ಣಿ ಅವರನ್ನು ನೇಮಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನಮ್ಮ ಊರಿನ ಚಾಸಾಃ7 ರವರು ಸಹ ಗ್ರಾಮ ಪಂಚಾಯತ ಸದಸ್ಯರಾಗಿದ್ದೇವೆ ಎಂದರೆ ಸರಿ. ಅದರಂತೆ ನಮ್ಮಂತೆ ಇನ್ನು ಏಂಟು ಜನ ಗ್ರಾಮ ಪಂಚಾಯತ ಸದಸ್ಯರು ಆಯ್ಕೆ ಆಗಿದ್ದರು ಎಂದರೆ ಸರಿಯಲ್ಲ.

ಹಿರೇಬೂದಿಹಾಳ ಗ್ರಾಮದಿಂದ ಮಮ್ತಾಜಬೇಗಂ ಶೇತಸನದಿ, ದೇವೆಂದ್ರಗೌಡ ಕಂಠೇಪ್ಪಗೌಡ ಹಾಗೂ ಇನ್ನು ಎರಡು ಜನ ಸದಸ್ಯರು ಅಂತ ಆಯ್ಕೆಯಾಗಿದ್ದರು ಎಂದರೆ ಸರಿ. ಮೊದಲನೆಯ ಅವಧಿಯ ಅಧ್ಯಕ್ಷರು ಅಂತ ಮಮ್ತಾಜಬೇಗಂ ಶೇತಸನದಿ ಇವರಿಗೆ ಆಯ್ಕೆ ಮಾಡಲಾಗಿತುತ ಎಂದರೆ ಸರಿ. ಆ ಸಮಯದಲ್ಲಿ ಪಿಡಿಓ ಎನ್.ಯ್ಯೂ ಶೆಟ್ಟನ್ನವರ ಎಂದು ಇದ್ದರು ಎಂದರೆ ಸರಿ. ಕಾರ್ಯದರ್ಶಿ ಅಂತ ಎಮ್.ಎ ನದಾಫ ಇದ್ದರು ಎಂದರೆ ಸರಿ.

2009-2010 ರಂದು ನೀಲವ್ವ ಭದ್ರಾಪುರ ಇವರು ಅಧ್ಯಕ್ಷರು ಅಂತ ಕೆಲಸ ಮಾಡುತ್ತಿರುವಾಗ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎರಡು ಗ್ರಾಮಗಳ ಹದ್ದಿನಲ್ಲಿರುವ ರಸ್ತೆ ಸುಧಾರಣೆ ಮಾಡುವ ಕೆಲಸ ಹಾಗೂ ರಸ್ತೆ ತಯಾರಿಸುವ ಕೆಲಸವನ್ನು ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಹಿರಿಯ ಇಂಜಿನೀಯರಾಗಿ ವಿ.ಎಮ್? ತಿರಕನಗೌಡರು ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳ ಅನುಷ್ಠಾನಗೊಳಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಕೂಲಿಕಾರ ಜನರಿಂದ ರಸ್ತೆ ಕೆಲಸ ಮಾಡಿಸಿದ್ದು ಹಾಗೂ ಸಿಗ್ಗಾಂವನಿಂದ ಜೆಸಿಬಿಗಳನ್ನು ತರಿಸಿ ಹಿರೇಬೂದಿಹಾಳ ಗ್ರಾಮದ ಗುರುಸಿದ್ದನಗೌಡ ಬನ್ನೂರು ಇವರ ಹೊಲದಿಂದ ಟ್ರ್ಯಾಕ್ಟರ

ಮುಖಾಂತರ ಮೋಹರಂ ಮಣ್ಣನ್ನು ಹೆರಿಸಿ ರಸ್ತೆಗಳಿಗೆ ಹಾಕಿಸಿ ನೀರು ಹಾಕಿ ರೋಲರ್ ಹೊಡಿಸಿ ಉತ್ತಮ ರಸ್ತೆಗಳನ್ನು ತಯಾರಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಅವಧಿಯಲ್ಲಿ ಮಮ್ತಾಜಬೇಗಂ ಶೇತಸನದಿ ಇವರು ಅಧ್ಯಕ್ಷರು ಅಂತ ಕೆಲಸ ಮಾಡುವ ಕಾಲಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈ ಹಿಂದೇ ಆದ ಕಾಮಗಾರಿಗಳ ಬಗ್ಗೆ ಹೊಸದಾಗಿ ಬಂದ ನಾಗೇಶ ಶೆಟ್ಟನ್ನವರ ಹಾಗೂ ಅಧ್ಯಕ್ಷರಾದ ಮಮ್ತಾಜಬೇಗಂ ಇವರು ಎನ್? ಎಮ್?ಆರ್ ಗಳನ್ನು ಖೊಟ್ಟಿಯಾಗಿ ತಯಾರಿಸಿ ಕೂಲಿಕಾರರ ಹೆಸರುಗಳನ್ನು ಖೊಟ್ಟಿಯಾಗಿ ಬರೆದುಕೊಂಡು ಹಣವನ್ನು ಹೆಚ್ಚಿಗೆ ತೋರಿಸಿ ಕೂಲಿಕಾರರ ಹೆಸರುಗಳ ಮುಂದೆ ಖೊಟ್ಟಿ ಸಹಿ ಮಾಡಿಸಿ ನಿಜ ದಾಖಲೆ ಅಂತ ಸಹಿ ಮಾಡಿ ಹಣವನ್ನು ಬ್ಯಾಂಕಿನಿಂದ ಕೇಲವೇ ಜನರ ಖಾತೆಗಳಿಗೆ ಜಮಾ ಮಾಡಿ ಅವರಿಂದ ಹಣ ಪಡೆದು ತನಗೆ ಬೇಕಾದ ಕೂಲಿಕಾರರಿಗೆ ಹಣವನ್ನು ಕೊಟ್ಟಂತೆ ಮಾಡಿ ಅನುದಾನದ ಹಣವನ್ನು ಸ್ವಂತಕ್ಕೆ ದುರುಪಯೋಗ ಮಾಡಿಕೊಂಡಿರುತ್ತಾರೆ ಅಂತ ಹೇಳಿ ಪಂಚಾಯತಿ ಕಛೇರಿಗೆ ಎದುರುಗೆ ಬಂದು ಈವರೆವಿಗೂ ದುಡಿದ ಕೂಲಿ ಕಾರ್ಮಿಕರ ಹಣ ಕೊಟ್ಟಿರುವುದಿಲ್ಲ ಹಣ ಕೊಡಿ ಅಂತ ಇಲ್ಲವಾದಲ್ಲಿ ಪಂಚಾಯತಿ ಮುಂದೆ ಸತ್ಯಾಗ್ರಹ ಮಾಡಿ ಬಾಯಿ ಗಲಾಟೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಷಯವಾಗಿ ಮಮ್ತಾಜಬೇಗಂ ಇವರಿಗೆ ವಿಚಾರಿಸಿದಾಗ ವಿ.ಎಮ್? ತಿರಕನಗೌಡರು ಹಿರಿಯ ಇಂಜಿನೀಯರ ಜಿಲ್ಲಾ ಪಂಚಾಯತ ಕುಂದಗೋಳ ಕಾಮಗಾರಿ ಮಾಡಿ ಕೂಲಿಕಾರ ಜನರಿಗೆ ಹಾಗೂ ಮಾಲು ಸಪ್ಲೈ ಮಾಡಿದ ಜನರಿಗೆ ಹಣಕೊಟ್ಟಿರುವುದಿಲ್ಲ, ಹೀಗಾಗಿ ಅವರು ಹಣ ಕೊಡಲು ಕೇಳಿ ಈ ರೀತಿ ಜಗಳ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ವಿಷಯವಾಗಿ ನಾನು ಮತ್ತು ಪಂಚಾಯತ ಸದಸ್ಯರಾದ ಚಾಸಾಃ7 ರವರು ಹಾಗೂ ಪ್ರಸ್ತುತ ಅಧ್ಯಕ್ಷನಾದ ನಾನು ಹಾಗೂ ಹಾಲಿ ಉಪಾಧ್ಯಕ್ಷರಾದ ಅಡವೆಪ್ಪ ಸುಬಾರಗಟ್ಟಿ ಇವರು ಜಿಲ್ಲಾ ಪಂಚಾಯತ ಟಇಓ ಅವರಿಗೆ ಸಹಿನಿಶಿ ವಿಷಯವಾಗಿ ಅರ್ಜಿಯನ್ನು ಸಲ್ಲಿಸಿದ್ದು ಹಿಂದೇ ಇದ್ದ ಅಧಿಕಾರಿಗಳಿಂದ ಹಾಗೂ ಪ್ರಸ್ತುತ ಅಧಿಕಾರಿಗಳಿಂದ ಹಣ ದುರುಬಳಕೆಯಾಗಿರುವ ಬಗ್ಗೆ ವಿಚಾರವನ್ನು ತನಿಖೆ ಆಗಬೇಕು ಅಂತ ಒಂದು ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

ಜಿಲ್ಲಾ ಪಂಚಾಯತಿಯವರು ಜಾಗ್ರತ ದಳದ ಮುಖ್ಯಸ್ದರಾದ ಚಾಸಾಃ4 ಹಾಗೂ 5 ರವರನ್ನು ಅನುದಾನದ ಹಣ ಅವ್ಯವಹಾರ ಆಗಿರುವ ಬಗ್ಗೆ ಪರಿಶೀಲನೆ ಮಾಡಲು

ಆದೇಶ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಚಾಸಾಃ4 ಮತ್ತು 5 ರವರು ಪರಿಶೀಲನೆ ಮಾಡಿ ಇಂಗಳಗಿ ತರ್ಲಘಟ್ಟ ರಸ್ತೆಯನ್ನು ಮಾಡಿಸಲು ಪಂಚಾಯತಿಯ ಹಿಂದಿನ ಕಾರ್ಯದರ್ಶಿಯಾದ ನದಾಫ, ಅಧ್ಯಕ್ಷರಾದ ನೀಲವ್ವ ಭದ್ರಾಪುರ ಇವರು ಒಬ್ಬ ಭರಮಗೌಡ ದ್ಯಾಮನಗೌಡ ಹಿರೇಬೂದಿಹಾಳ ಎನ್ನುವವರಿಗೆ ಗುತ್ತಿಗೆ ಆದಾರದ ಮೇಲೆ ಕೊಟ್ಟಿದ್ದು, ನಂತರ ಜೆಸಿಬಿ ಗಳನ್ನು ಉಪಯೋಗಿಸಿ ಆ ಕಾಮಗಾರಿಯನ್ನು ಪೂರ್ಣಗೊಳಿಸಿರತ್ತಾರೆ ಹಾಗೂ ಕೂಲಿಕಾರಗಳಿಂದ ಕೆಲಸ ಮಾಡಿಸದೇ ಇದ್ದರು ಸಹ ಪಂಚಾಯತಿ ವತಿಯಿಂದ ಕೆಲಸ ಮಾಡಿಸಿರುವುದಾಗಿ ಮೇಲಾಧಿಕಾರಿಗಳು ನಂಬುವಂತೆ ಕೂಲಿಕಾರರ ಹಾಜರಾತಿಯನ್ನು ಪಟ್ಟಿಯನ್ನು ಖೊಟ್ಟಿಯಾಗಿ ತಯಾರಿಸಿದ್ದು ಹಾಗೂ ಚೆಕ್ಕ ನಂಃ172556 ದಿಃ01.02.2010 ರಂದು ಮೊತ್ತ ರೂ 1,52,600/- ಕೊಟ್ಟಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಅ.ನಂಃ61955, 61176, 61175 ಈ ಪ್ರಕಾರ ಮೂರು ಕೂಲಿಕಾರರ ಪಟ್ಟಿಗಳಲ್ಲಿ 218 ಜನರ ಕೂಲಿ ಕೆಲಸ ಮಾಡಿರುವ ಬಗ್ಗೆ ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಎನ್ ಎಮ್ ಆರ್ ಗಳಲ್ಲಿ ಮೊತ್ತವನ್ನು ಗುತ್ತಿಗೆದಾರರಾದ ಭರಮಗೌಡ ದ್ಯಾಮನಗೌಡರ ಹೆಸರನ್ನು ಸೂಚನಾ ಪತ್ರದಲ್ಲಿ ನಮೂದಿಸಿ ಅವರ ಹೆಸರಿಗೆ ಎರಡು ಚೆಕ್ಕಗಳನ್ನು ಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎನ್ ಎಮ್ ಆರ್ 61175 ರಲ್ಲಿ 7 ಕೂಲಿಕಾರರ ಹೆಸರಗಳ ಮೇಲೆ ಅವರ ಖಾತೆಗಳಿಗೆ ಬ್ಯಾಂಕಿನಲ್ಲಿ ಹಣ ಜಮಾ ಮಾಡಿಸಿ ಪಂಚಾಯತಿ ವತಿಯಿಂದ ಹಣವನ್ನು ಪರತ ಪಡೆದು ಸ್ವಂತಕ್ಕೆ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ವಿ.ಎಮ್ ತಿರಕನಗೌಡರ ಇವರು ಅಂತಿಮ ಕಾಮಗಾರಿ ತೋರಿಸಿ ಪೂರ್ತಿ ಕೆಲಸ ಆಗಿದೆ ಅಂತ ಫೈನಲ್ ಬಿಲ್ಲನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕಾರ ಚಾಸಾಃ4 ರವರು ವರದಿಯನ್ನು ಸಲ್ಲಿಸಿದ್ದು, ನಾನು ಮತ್ತು ಚಾಸಾಃ7 ರವರು ಆ ಸಮಯದಲ್ಲಿ ಹಾಜರು ಇದ್ದೇವು ಎಂದರೆ ಸರಿಯಲ್ಲ.

ಎಮ್ ಎಮ್ ಆರ್ ನಂಃ17 ಹಾಗೂ 269 ಇವುಗಳಲ್ಲಿ ಕೂಲಿಕಾರರ ಮೊತ್ತವನ್ನು ಹನಮಂತಗೌಡ ಬನ್ನೂರು ಹಾಗೂ 6 ಜನರ ಹೆಸರುಗಳಿಗೆ ಉಳಿತಾಯ ಖಾತೆಯಲ್ಲಿ ಹಣ ಜಮಾ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉದ್ಯೋಗ

ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿರುವುದಿಲ್ಲ, ಶಿವನಗೌಡ ಬನ್ನೂರು ಇವರ ಕುಟುಂಬದವರು ದೊಡ್ಡ ಜಮೀನುದ್ದಾರರು ಇರುತ್ತಾರೆ ಅಂತ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.ಈ ಯೋಜನೆಯಡಿಯಲ್ಲಿ ಚೆಕ್ಕ ನಂ:944007, 944008, 944009 ಇವುಗಳ ಜರಾಕ್ಸ ಪ್ರತಿಗಳನ್ನು ನೋಡಿ ದಿ:07.09.2010 ರಂದು ಮೂರು ಚೆಕ್ಕುಗಳನ್ನು ಒಂದೇ ವ್ಯಕ್ತಿಯಾದ ಅಶೋಕ ವಿ.ಶಿರೋಳ ಇವರ ಹೆಸರಿಗೆ ಪಂಚಾಯತಿ ಇವರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಇವರು ಹಿರಿಯ ಇಂಜಿನೀಯರ್ ವಿ.ಎಮ್ ತಿರಕಗೌಡ್ರ ಇವರ ಖಾಸಾ ಅಳಿಯನಿದ್ದು ಇವರು ಎಮ್ ಜಿ ಎನ್ ಆರ್ ಇ ಇ ಜಿ ಎ ಯೋಜನೆಯ ಕಾಮಗಾರಿಯಲ್ಲಿ ಯಾವುದೇ ಮೆಟರಿಯಲ್ ಸಪ್ಲೈ ಮಾಡದೇ ಇದ್ದರು ಇವರ ಸ್ವಂತ ಹೆಸರಿಗೆ ಪಂಚಾಯತಿಯಿಂದ ಚೆಕ್ಕುಗಳನ್ನು ಕೊಡಿಸಿ ಅವರ ಖಾತೆಗೆ ಜಮಾ ಮಾಡಿಸಿ ವಿ.ಎಮ್ ತಿರಕಗೌಡ್ರ ಇವರು ಸರಕಾರ ಆದೇಶಗಳ ಉಲ್ಲಂಘನೆ ಮಾಡಿ ಅಧ್ಯಕ್ಷ ಮತ್ತು ಪಿಡಿಓ ಅವರ ಜೊತೆಗೆ ಮೀಲಾಪೆಯಾಗಿ ಅನುದಾನದ ಹಣವನ್ನು ದುರುಪಯೋಗ ಮಾಡಿಕೊಂಡು 2009-2010 ಹಾಗೂ 2010-2011 ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿ ಇವೆಲ್ಲರೂ ಅನುಷ್ಠಾನದ ಹಣವನ್ನು ಖೊಟ್ಟಿ ದಾಖಲೆಗಳನ್ನು ಸೃಷ್ಠಿ ಮಾಡಿ ತಮ್ಮ ಸ್ವಂತ ಲಾಭಕ್ಕೆ ಹಣವನ್ನು ದುರುಪಯೋಗ ಮಾಡಿಕೊಂಡಿದ್ದು ಮತ್ತು ಸರಕಾರಕ್ಕೆ ಕೂಲಿಕಾರರಿಗೆ ಮೋಸ ಹಾಗು ವಂಚನೆ ಮಾಡಿರುತ್ತಾರೆ ಅಂತ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ:14 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಸಿಸಿ ನಂಃ 50/2016</u>**

**<u>ಸಿಡಬ್ಲೂಃ9 ಪಿ ಡಬ್ಲ್ಯೂಃ8</u>**

**ಹೆಸರುಃ** ಅಡವೆಪ್ಪ

**ತಂದೆ ಹೆಸರುಃ** ನಿಂಗಪ್ಪ ಸುಬರಗಟ್ಟಿ

**ವಯಸ್ಸುಃ** 57 ವರ್ಷಗಳು.

**ಉದ್ಯೋಗಃ** ವ್ಯವಸಾಯ

**ವಾಸ ಸ್ಥಳಃ** ಇಂಗಳಗಿ.

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 07/10/2024.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನನಗೆ ಚಾಸಾಃ2, 3, 6, 7, 8, 20, 23, 24, 25, 26, 27, 29, 30, 32, 33, 35, ರವರ ಪರಿಚಯ ಇದೆ. ಚಾಸಾಃ1, 4, 5, 10, 11, 12, 13, 14, 15, 16, 17, 18, 19, 21, 22, 28, 31, 34, 36 ರವರ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 1, 2 ಹಾಗೂ 4 ರವರನ್ನು ನೋಡಿ ಸಾಕ್ಷಿ ಅವರೊಂದಿಗೆ ತನಗೆ ಪರಿಚಯ ಇದೆ. ಸಾಕ್ಷಿ 5 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

ನಮ್ಮ ಗ್ರಾಮ ಪಂಚಾಯತಿಯಲ್ಲಿ ಹಿರೇಬೂದಿಹಾಳ ಗ್ರಾಮ ಪಂಚಾಯತಿ ಸೇರುತ್ತದೆ ಎಂದರೆ ಸರಿ. 2005 ಮತ್ತು 2006ರ ಗ್ರಾಮ ಪಂಚಾಯತ ಚುನಾವಣೆ ಆಗಿದ್ದು ಅದರಲ್ಲಿ ಒಟ್ಟು 11 ಜನ ಸದಸ್ಯರು ಆಯ್ಕೆಯಾಗಿದ್ದರು ಎಂದರೆ ಸಾಕ್ಷಿ 15 ಜನ ಆಯ್ಕೆಯಾಗಿದ್ದರು ಎಂದು ನುಡಿಯುತ್ತಾರೆ. ಅದೇ ಪ್ರಕಾರ ಹಿರೇಬೂದಿಹಾಳ ಗ್ರಾಮದಿಂದ ಶಿವನಗೌಡ ಬನ್ನೂರ ಹಾಗೂ ಅನ್ವಸಾಬ ನದಾಫ ಇವರು ಆಯ್ಕೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಅವಧಿಯಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಅಂತ ಎಮ್ ಎ ನದಾಫ ಎಂದು ಇದ್ದರು ಎಂದರೆ ಸರಿ. ಶಂಕ್ರಪ್ಪ ಸಂಗಣ್ಣನವರ ಮತ್ತು ಬಸವರಾಜ ಮಲ್ಲಿಗವಾಡ ಇವರು ಗುಮಾಸ್ತರಾಗಿ ಕೆಲಸ ಮಾಡುತಿದ್ದರು ಎಂದರೆ ಸರಿ. ಇವರೆಲ್ಲರೂ ತಮ್ಮ ಅವಧಿ ಮುಗಿದಿದ್ದರು ಸಹ ಮುಂದುವರೆದು 3 ತಿಂಗಳವರೆಗೂ ಗ್ರಾಮ ಪಂಚಾಯತಿ ಆಡಳಿತಾಧಿಕಾರಿ ಎ.ಆರ್.ಕುಲಕರ್ಣಿ ಅವರನ್ನು ನೇಮಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನಮ್ಮ ಊರಿನ ಚಾಸಾಃ7 ರವರು ಸಹ ಗ್ರಾಮ ಪಂಚಾಯತ ಸದಸ್ಯರಾಗಿದ್ದೇವೆ ಎಂದರೆ ಸರಿ. ಅದರಂತೆ ನಮ್ಮಂತೆ ಇನ್ನು ಏಂಟು ಜನ ಗ್ರಾಮ ಪಂಚಾಯತ ಸದಸ್ಯರು ಆಯ್ಕೆ ಆಗಿದ್ದರು ಎಂದರೆ ಸರಿಯಲ್ಲ.

ಹಿರೇಬೂದಿಹಾಳ ಗ್ರಾಮದಿಂದ ಮಮ್ತಾಜಬೇಗಂ ಶೇತಸನದಿ, ದೇವೆಂದ್ರಗೌಡ ಕಂಠೇಪ್ಪಗೌಡ ಹಾಗೂ ಇನ್ನು ಎರಡು ಜನ ಸದಸ್ಯರು ಅಂತ ಆಯ್ಕೆಯಾಗಿದ್ದರು ಎಂದರೆ ಸರಿ. ಮೊದಲನೆಯ ಅವಧಿಯ ಅಧ್ಯಕ್ಷರು ಅಂತ ಮಮ್ತಾಜಬೇಗಂ ಶೇತಸನದಿ ಇವರಿಗೆ ಆಯ್ಕೆ ಮಾಡಲಾಗಿತುತ ಎಂದರೆ ಸರಿ. ಆ ಸಮಯದಲ್ಲಿ ಪಿಡಿಓ ಎನ್.ಯ್ಯೂ ಶೆಟ್ಟಣ್ಣವರ ಎಂದು ಇದ್ದರು ಎಂದರೆ ಸರಿ. ಕಾರ್ಯದರ್ಶಿ ಅಂತ ಎಮ್.ಎ ನದಾಫ ಇದ್ದರು ಎಂದರೆ ಸರಿ.

2009-2010 ರಂದು ನೀಲವ್ವ ಭದ್ರಾಪುರ ಇವರು ಅಧ್ಯಕ್ಷರು ಅಂತ ಕೆಲಸ ಮಾಡುತ್ತಿರುವಾಗ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎರಡು ಗ್ರಾಮಗಳ ಹದ್ದಿನಲ್ಲಿರುವ ರಸ್ತೆ ಸುಧಾರಣೆ ಮಾಡುವ ಕೆಲಸ ಹಾಗೂ ರಸ್ತೆ ತಯಾರಿಸುವ ಕೆಲಸವನ್ನು ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಹಿರಿಯ ಇಂಜಿನೀಯರಾಗಿ ವಿ.ಎಮ್? ತಿರಕನಗೌಡರು ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳ ಅನುಷ್ಠಾನಗೊಳಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಕೂಲಿಕಾರ

ಜನರಿಂದ ರಸ್ತೆ ಕೆಲಸ ಮಾಡಿಸಿದ್ದು ಹಾಗೂ ಸಿಗ್ಗಾಂವನಿಂದ ಜೆಸಿಬಿಗಳನ್ನು ತರಿಸಿ ಹಿರೇಬೂದಿಹಾಳ ಗ್ರಾಮದ ಗುರುಸಿದ್ದನಗೌಡ ಬನ್ನೂರು ಇವರ ಹೊಲದಿಂದ ಟ್ರ್ಯಾಕ್ಟರ ಮುಖಾಂತರ ಮೋಹರಂ ಮಣ್ಣನ್ನು ಹೆರಿಸಿ ರಸ್ತೆಗಳಿಗೆ ಹಾಕಿಸಿ ನೀರು ಹಾಕಿ ರೋಲರ್ ಹೊಡಿಸಿ ಉತ್ತಮ ರಸ್ತೆಗಳನ್ನು ತಯಾರಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಅವಧಿಯಲ್ಲಿ ಮಮ್ತಾಜಬೇಗಂ ಶೇತಸನದಿ ಇವರು ಅಧ್ಯಕ್ಷರು ಅಂತ ಕೆಲಸ ಮಾಡುವ ಕಾಲಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈ ಹಿಂದೇ ಆದ ಕಾಮಗಾರಿಗಳ ಬಗ್ಗೆ ಹೊಸದಾಗಿ ಬಂದ ನಾಗೇಶ ಶೆಟ್ಟನ್ನವರ ಹಾಗೂ ಅಧ್ಯಕ್ಷರಾದ ಮಮ್ತಾಜಬೇಗಂ ಇವರು ಎನ್?ಎಮ್?ಆರ್ ಗಳನ್ನು ಖೊಟ್ಟಿಯಾಗಿ ತಯಾರಿಸಿ ಕೂಲಿಕಾರರ ಹೆಸರುಗಳನ್ನು ಖೊಟ್ಟಿಯಾಗಿ ಬರೆದುಕೊಂಡು ಹಣವನ್ನು ಹೆಚ್ಚಿಗೆ ತೋರಿಸಿ ಕೂಲಿಕಾರರ ಹೆಸರುಗಳ ಮುಂದೆ ಖೊಟ್ಟಿ ಸಹಿ ಮಾಡಿಸಿ ನಿಜ ದಾಖಲೆ ಅಂತ ಸಹಿ ಮಾಡಿ ಹಣವನ್ನು ಬ್ಯಾಂಕಿನಿಂದ ಕೇಲವೇ ಜನರ ಖಾತೆಗಳಿಗೆ ಜಮಾ ಮಾಡಿ ಅವರಿಂದ ಹಣ ಪಡೆದು ತನಗೆ ಬೇಕಾದ ಕೂಲಿಕಾರರಿಗೆ ಹಣವನ್ನು ಕೊಟ್ಟಂತೆ ಮಾಡಿ ಅನುದಾನದ ಹಣವನ್ನು ಸ್ವಂತಕ್ಕೆ ದುರುಪಯೋಗ ಮಾಡಿಕೊಂಡಿರುತ್ತಾರೆ ಅಂತ ಹೇಳಿ ಪಂಚಾಯತಿ ಕಛೇರಿಗೆ ಎದುರುಗೆ ಬಂದು ಈವರೆವಿಗೂ ದುಡಿದ ಕೂಲಿ ಕಾರ್ಮಿಕರ ಹಣ ಕೊಟ್ಟಿರುವುದಿಲ್ಲ ಹಣ ಕೊಡಿ ಅಂತ ಇಲ್ಲವಾದಲ್ಲಿ ಪಂಚಾಯತಿ ಮುಂದೆ ಸತ್ಯಾಗ್ರಹ ಮಾಡಿ ಬಾಯಿ ಗಲಾಟೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಷಯವಾಗಿ ಮಮ್ತಾಜಬೇಗಂ ಇವರಿಗೆ ವಿಚಾರಿಸಿದಾಗ ವಿ.ಎಮ್? ತಿರಕನಗೌಡರು ಹಿರಿಯ ಇಂಜಿನೀಯರ ಜಿಲ್ಲಾ ಪಂಚಾಯತ ಕುಂದಗೋಳ ಕಾಮಗಾರಿ ಮಾಡಿ ಕೂಲಿಕಾರ ಜನರಿಗೆ ಹಾಗೂ ಮಾಲು ಸಪ್ಲೈ ಮಾಡಿದ ಜನರಿಗೆ ಹಣಕೊಟ್ಟಿರುವುದಿಲ್ಲ, ಹೀಗಾಗಿ ಅವರು ಹಣ ಕೊಡಲು ಕೇಳಿ ಈ ರೀತಿ ಜಗಳ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ವಿಷಯವಾಗಿ ನಾನು ಮತ್ತು ಪಂಚಾಯತ ಸದಸ್ಯರಾದ ಚಾಸಾಃ7 ರವರು ಹಾಗೂ ಪ್ರಸ್ತುತ ಅಧ್ಯಕ್ಷನಾದ ಚಾಸಾಃ8 ಹಾಗೂ ಹಾಲಿ ಉಪಾಧ್ಯಕ್ಷರಾದ ನಾನು ಜಿಲ್ಲಾ ಪಂಚಾಯತ ಟಿಇಓ ಅವರಿಗೆ ಸಹಿನಿಶಿ ವಿಷಯವಾಗಿ ಅರ್ಜಿಯನ್ನು ಸಲ್ಲಿಸಿದ್ದು ಹಿಂದೇ ಇದ್ದ ಅಧಿಕಾರಿಗಳಿಂದ ಹಾಗೂ ಪ್ರಸ್ತುತ ಅಧಿಕಾರಿಗಳಿಂದ ಹಣ ದುರುಬಳಕೆಯಾಗಿರುವ ಬಗ್ಗೆ ವಿಚಾರವನ್ನು ತನಿಖೆ ಆಗಬೇಕು ಅಂತ ಒಂದು ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

ಜಿಲ್ಲಾ ಪಂಚಾಯತಿಯವರು ಜಾಗ್ರತ ದಳದ ಮುಖ್ಯಸ್ಥರಾದ ಚಾಸಾಃ4 ಹಾಗೂ 5 ರವರನ್ನು ಅನುದಾನದ ಹಣ ಅವ್ಯವಹಾರ ಆಗಿರುವ ಬಗ್ಗೆ ಪರಿಶೀಲನೆ ಮಾಡಲು ಆದೇಶ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಚಾಸಾಃ4 ಮತ್ತು 5 ರವರು ಪರಿಶೀಲನೆ ಮಾಡಿ ಇಂಗಳಗಿ ತರ್ಲಘಟ್ಟ ರಸ್ತೆಯನ್ನು ಮಾಡಿಸಲು ಪಂಚಾಯತಿಯ ಹಿಂದಿನ ಕಾರ್ಯದರ್ಶಿಯಾದ ನದಾಫ, ಅಧ್ಯಕ್ಷರಾದ ನೀಲವ್ವ ಭದ್ರಾಪುರ ಇವರು ಒಬ್ಬ ಭರಮಗೌಡ ದ್ಯಾಮನಗೌಡ ಹಿರೇಬೂದಿಹಾಳ ಎನ್ನುವವರಿಗೆ ಗುತ್ತಿಗೆ ಆದಾರದ ಮೇಲೆ ಕೊಟ್ಟಿದ್ದು, ನಂತರ ಜೆಸಿಬಿ ಗಳನ್ನು ಉಪಯೋಗಿಸಿ ಆ ಕಾಮಗಾರಿಯನ್ನು ಪೂರ್ಣಗೊಳಿಸಿರತ್ತಾರೆ ಹಾಗೂ ಕೂಲಿಕಾರಗಳಿಂದ ಕೆಲಸ ಮಾಡಿಸದೇ ಇದ್ದರು ಸಹ ಪಂಚಾಯತಿ ವತಿಯಿಂದ ಕೆಲಸ ಮಾಡಿಸಿರುವುದಾಗಿ ಮೇಲಾಧಿಕಾರಿಗಳು ನಂಬುವಂತೆ ಕೂಲಿಕಾರರ ಹಾಜರಾತಿಯನ್ನು ಪಟ್ಟಿಯನ್ನು ಖೊಟ್ಟಿಯಾಗಿ ತಯಾರಿಸಿದ್ದು ಹಾಗೂ ಚೆಕ್ಕ ನಂಃ172556 ದಿಃ01.02.2010 ರಂದು ಮೊತ್ತ ರೂ 1,52,600/- ಕೊಟ್ಟಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಅ.ನಂಃ61955, 61176, 61175 ಈ ಪ್ರಕಾರ ಮೂರು ಕೂಲಿಕಾರರ ಪಟ್ಟಿಗಳಲ್ಲಿ 218 ಜನರ ಕೂಲಿ ಕೆಲಸ ಮಾಡಿರುವ ಬಗ್ಗೆ ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಎನ್ ಎಮ್ ಆರ್ ಗಳಲ್ಲಿ ಮೊತ್ತವನ್ನು ಗುತ್ತಿಗೆದಾರರಾದ ಭರಮಗೌಡ ದ್ಯಾಮನಗೌಡರ ಹೆಸರನ್ನು ಸೂಚನಾ ಪತ್ರದಲ್ಲಿ ನಮೂದಿಸಿ ಅವರ ಹೆಸರಿಗೆ ಎರಡು ಚೆಕ್ಕಗಳನ್ನು ಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎನ್ ಎಮ್ ಆರ್ 61175 ರಲ್ಲಿ 7 ಕೂಲಿಕಾರರ ಹೆಸರಗಳ ಮೇಲೆ ಅವರ ಖಾತೆಗಳಿಗೆ ಬ್ಯಾಂಕಿನಲ್ಲಿ ಹಣ ಜಮಾ ಮಾಡಿಸಿ ಪಂಚಾಯತಿ ವತಿಯಿಂದ ಹಣವನ್ನು ಪರತ ಪಡೆದು ಸ್ವಂತಕ್ಕೆ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ವಿ.ಎಮ್ ತಿರಕನಗೌಡರ ಇವರು ಅಂತಿಮ ಕಾಮಗಾರಿ ತೋರಿಸಿ ಪೂರ್ತಿ ಕೆಲಸ ಆಗಿದೆ ಅಂತ ಫೈನಲ್ ಬಿಲ್ಲನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕಾರ ಚಾಸಾಃ4 ರವರು ವರದಿಯನ್ನು ಸಲ್ಲಿಸಿದ್ದು, ನಾನು ಮತ್ತು ಚಾಸಾಃ7 ರವರು ಆ ಸಮಯದಲ್ಲಿ ಹಾಜರು ಇದ್ದೇವು ಎಂದರೆ ಸರಿಯಲ್ಲ.

ಎಮ್ ಎಮ್ ಆರ್ ನಂಃ17 ಹಾಗೂ 269 ಇವುಗಳಲ್ಲಿ ಕೂಲಿಕಾರರ

ಮೊತ್ತವನ್ನು ಹನಮಂತಗೌಡ ಬನ್ನೂರು ಹಾಗೂ 6 ಜನರ ಹೆಸರುಗಳಿಗೆ ಉಳಿತಾಯ ಖಾತೆಯಲ್ಲಿ ಹಣ ಜಮಾ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿರುವುದಿಲ್ಲ, ಶಿವನಗೌಡ ಬನ್ನೂರು ಇವರ ಕುಟುಂಬದವರು ದೊಡ್ಡ ಜಮೀನುದ್ದಾರರು ಇರುತ್ತಾರೆ ಅಂತ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.ಈ ಯೋಜನೆಯಡಿಯಲ್ಲಿ ಚೆಕ್ಕ ನಂಃ944007, 944008, 944009 ಇವುಗಳ ಜರಾಕ್ಸ ಪ್ರತಿಗಳನ್ನು ನೋಡಿ ದಿಃ07.09.2010 ರಂದು ಮೂರು ಚೆಕ್ಕುಗಳನ್ನು ಒಂದೇ ವ್ಯಕ್ತಿಯಾದ ಅಶೋಕ ವಿ.ಶಿರೋಳ ಇವರ ಹೆಸರಿಗೆ ಪಂಚಾಯತಿ ಇವರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಇವರು ಹಿರಿಯ ಇಂಜಿನೀಯರ್ ವಿ.ಎಮ್ ತಿರಕಗೌಡ್ರ ಇವರ ಖಾಸಾ ಅಳಿಯನಿದ್ದು ಇವರು ಎಮ್ ಜಿ ಎನ್ ಆರ್ ಇ ಇ ಜಿ ಎ ಯೋಜನೆಯ ಕಾಮಗಾರಿಯಲ್ಲಿ ಯಾವುದೇ ಮೆಟರಿಯಲ್ ಸಪ್ಲೈ ಮಾಡದೇ ಇದ್ದರು ಇವರ ಸ್ವಂತ ಹೆಸರಿಗೆ ಪಂಚಾಯತಿಯಿಂದ ಚೆಕ್ಕುಗಳನ್ನು ಕೊಡಿಸಿ ಅವರ ಖಾತೆಗೆ ಜಮಾ ಮಾಡಿಸಿ ವಿ.ಎಮ್ ತಿರಕಗೌಡ್ರ ಇವರು ಸರಕಾರ ಆದೇಶಗಳ ಉಲ್ಲಂಘನೆ ಮಾಡಿ ಅಧ್ಯಕ್ಷ ಮತ್ತು ಪಿಡಿಓ ಅವರ ಜೊತೆಗೆ ಮೀಲಾಪೆಯಾಗಿ ಅನುದಾನದ ಹಣವನ್ನು ದುರುಪಯೋಗ ಮಾಡಿಕೊಂಡು 2009-2010 ಹಾಗೂ 2010-2011 ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿ ಇವೆಲ್ಲರೂ ಅನುಷ್ಠಾನದ ಹಣವನ್ನು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ತಮ್ಮ ಸ್ವಂತ ಲಾಭಕ್ಕೆ ಹಣವನ್ನು ದುರುಪಯೋಗ ಮಾಡಿಕೊಂಡಿದ್ದು ಮತ್ತು ಸರಕಾರಕ್ಕೆ ಕೂಲಿಕಾರರಿಗೆ ಮೋಸ ಹಾಗು ವಂಚನೆ ಮಾಡಿರುತ್ತಾರೆ ಅಂತ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿಃ14 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**